# ವ್ಯವಸ್ಥಾಪಕ ಸಮಿತಿ (ನಿಯಮ 39)

ಪ್ರತಿಯೊಂದು ಮಕ್ಕಳ ಪಾಲನಾ ಸಂಸ್ಥೆಯಲ್ಲಿ ವ್ಯವಸ್ಥಾಪಕ ಸಮಿತಿಯನ್ನು ಬಾಲನ್ಯಾಯ (ಮಕ್ಕಳ ಪಾಲನಾ ಮತ್ತು ರಕ್ಷಣಾ) ಮಾದರಿ ನಿಯಮಗಳು 2016ರ 39ನೇ ನಿಯಮದಲ್ಲಿ ತಿಳಿಸಿರುವಂತೆ ಸೂಚಿತ ಸದಸ್ಯರನ್ನೊಳಗೊಂಡು ರಚಿಸುವುದು ವ್ಯವಸ್ಥಾಪಕ ಸಮಿತಿಯು ಈ ಕೆಳಗಿನ ಪ್ರಮುಖ ಉದ್ದೇಶಗಳನ್ನೊಳಗೊಂಡಿದೆ:

1. ಮಕ್ಕಳ ಪಾಲನಾ ಸಂಸ್ಥೆಯ ಕಾರ್ಯ ನಿರ್ವಹಣೆ
2. ಪ್ರತಿ ಮಗುವಿನ ಪ್ರಗತಿಯ ಮೆಲ್ವೀಚಾರಣೆಯನ್ನು ನಡೆಸುವುದು.
3. ಮಕ್ಕಳನ್ನು ಅವರ ವಯಸ್ಸು, ಅಪರಾಧದ ಸ್ವರೂಪ ಅಥವಾ ಅವರಿಗೆ ಅಗತ್ಯವಿರುವ ಉಪಚಾರ, ದೈಹಿಕ ಹಾಗು ಮಾನಸಿಕ ಆರೋಗ್ಯ ಮತ್ತು ಅವರು ವಾಸಿಸುವ ಅವದಿಯ ಆಧಾರದ ಮೇಲೆ ಗುಂಪುಗಳಾಗಿ ವಿಂಗಡಿಸಿ ವೈಯಕ್ತಿಕ ಸುರಕ್ಷಾ ಯೋಜನೆಯನ್ವಯ ಸೂಕ್ತ ಸುರಕ್ಷೆ ಮತ್ತು ಉಪಚಾರವನ್ನು ಖಾತ್ರಿ ಪಡಿಸುವುದು.

**ವ್ಯವಸ್ಥಾಪಕ ಸಮಿತಿ ರಚನೆ**

1. ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು (ಅಧ್ಯಕ್ಯರು)
2. ಸಂಸ್ಥೆಯ ಅಧೀಕ್ಷಕರು/ಮುಖ್ಯಸ್ಥರು (ಸದಸ್ಯ ಕಾರ್ಯದರ್ಶಿಗಳು)
3. ಪಿ.ಓ/ಸಿ.ಡಬ್ಲೂ.ಓ/ವಿಷಯ ನಿರ್ವಾಹಕರು ( ಸದಸ್ಯರು)
4. ವೈದ್ಯಾಧಿಕಾರಿಗಳು (ಸದಸ್ಯರು)
5. ಮನೋವೈದ್ಯಾಧಿಕಾರಿಗಳು/ಸಮಾಲೋಚಕರು (ಸದಸ್ಯರು)
6. ಕೌಶಾಲ್ಯಭಿವೃದ್ಧಿ ತರಬೇತಿದಾರರು (ಸದಸ್ಯರು)
7. ಶಿಕ್ಷಕರು (ಸದಸ್ಯರು)
8. ಸಿ.ಡಬ್ಲೂ.ಸಿ ಅಥವಾ ಜೆ.ಜೆ.ಬಿ ಸದಸ್ಯರು (ಸದಸ್ಯರು)
9. ಕನಿಷ್ಠ 2 ಮಕ್ಕಳ ಪ್ರತಿನಿಧಿಗಳು (ಸದಸ್ಯರು)
10. ಅಧ್ಯಕ್ಷರ ನಿರ್ದೇಶನದ ಮೇರೆಗೆ ಇನ್ನಿತರರು (ಸದಸ್ಯರು)

**ವ್ಯವಸ್ಥಾಪಕ ಸಮಿತಿಯಲ್ಲಿ ಚರ್ಚಿಸಬೇಕಾದ ವಿಷಯಗಳು**

ವ್ಯವಸ್ಥಾಪಕ ಸಮಿತಿಯು ತಿಂಗಳಿಗೊಂದು ಸಭೆ ನಡೆಸಿ ಈ ಕೆಳಗಿನ ವಿಷಯಗಳನ್ನು ಚ್ಚರ್ಚಿಸುವುದು

1. ಕಟ್ಟಡ ನಿರ್ವಹಣೆ, ದುರಸ್ತಿ ಮತ್ತು ನಿರ್ಮಾಣ ಕಾಮಗಾರಿಗಳು
2. ಆಹಾರ ಮತ್ತು ಪೌಷ್ಠಿಕತೆ.
3. ಆರೋಗ್ಯ ಮತ್ತು ನೈರ್ಮಲ್ಯ ಹಾಗೂ ಸ್ವಚ್ಛತೆ
4. ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ ತರಬೇತಿ ಹಾಗೂ ಇನ್ನೀತರೆ ಚಟುವಟಿಕೆಗಳು
5. ಸುರಕ್ಷತೆ ಮತ್ತು ರಕ್ಷಣಾ ವ್ಯವಸ್ಥೆ.
6. ಸಿಬ್ಬಂದಿ ಮತ್ತು ಮಕ್ಕಳ ನಡುವಿನ ಸಂವಹನ.
7. ಮಕ್ಕಳಿಗೆ ಒದಗಿಸಲೇ ಬೇಕಾದ ಮೂಲಭೂತ ಸೌಲಭ್ಯಗಳು (ಅಗತ್ಯ ವಸ್ತುಗಳು)
8. ಮಕ್ಕಳ ಕಡತಗಳ ನಿರ್ವಹಣೆ (42 ದಾಖಲೆಗಳು)
9. ಕಾನೂನು ಸೇವೆಗಳು ಮತ್ತು ಜಾಗೃತಿ
10. ದೈನಂದಿನ ಕಾರ್ಯ ಚಟುವಟಿಕೆಗಳು ಮತ್ತು ಇನ್ನಿ ೀತರೆ ಚಟುವಟಿಕೆಗಳ
11. ಮಕ್ಕಳ ವೈಯಕ್ತಿಕ ಸಮಸ್ಯೆಗಳು ಮತ್ತು ಸಂಸ್ಥೆಯೊಂದಿಗೆ ಹೊಂದಾಣಿಕೆ;
12. ವೃತ್ತಿಪರ ತರಬೇತಿ ಮತ್ತು ಉದ್ಯೋಗಾವಕಾಶ;
13. ಸಾಮಾಜಿಕ ಹೊಂದಣಿಕೆ, ಮನರಂಜನೆ, ಗುಂಪು ಕಾರ್ಯಚಟುವಟಿಕೆ, ಮಾರ್ಗದರ್ಶನ ಮತ್ತು ಆಪ್ತ ಸಮಲೋಚನೆ;
14. ಮಕ್ಕಳ ಅಗತ್ಯಗಳಿಗನುಗುಣವಾಗಿ ನಿವಾಸಿ ಕಾರ್ಯಕ್ರಮಗಳಲ್ಲಿ ಪ್ರಗತಿ, ಹೊಂದಾಣಿಕೆ ಮತ್ತು ಮಾರ್ಪಾಡು;
15. ಬಿಡುಗಡೆಯ ಪೂರ್ವದಲ್ಲಿ ಅಥವಾ ಸ್ಥಿರೀಕರಣದ ಪೂರ್ವದ ತಯಾರಿ.
16. ಬಿಡುಗಡೆ ಅಥವಾ ಸ್ಥಿರೀಕರಣ.
17. ಬಿಡುಗಡೆಯ ನಂತರದ ಅಥವಾ ಸ್ಥಿರೀಕರಣದ ನಂತರದ ಅನುಸರಣೆ.